26) 18–11–2022 ರಂದು ರೋಟರಿ ಸಹಯೋಗದೊಂದಿಗೆ 'ಸ್ತನ ಕ್ಯಾನ್ಸರ್ ಹಾಗೂ ಗರ್ಭಕೋಶದ ಕ್ಯಾನ್ಸರ್' ಬಗ್ಗೆ ಮಾಹಿತಿಯನ್ನು ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಡಾ॥ ಕೌಸ್ತುಭ ಅವರು ಅಗಮಿಸಿದ್ದರು.




27) 09–12–2022 ರಂದು ರೋಟರಿ ಸಹಯೋಗದೊಂದಿಗೆ ಟಿ.ಬಿ. ಖಾಯೆಲೆಯ ಗುಣಲಕ್ಷಣಗಳು ಹಾಗೂ ನಿಯಂತ್ರಣದ ಬಗ್ಗೆ ಡಾ॥ ದಿನೇಶ್ ಅವರಿಂದ ಮಾಹಿತಿ ಏರ್ಪಡಿಸಲಾಗಿತ್ತು. ಹಾಗು ಟಿ.ಬಿ. ರೋಗಿಗಳಿಗೆ ಉಪಯುಕ್ತ ಆಹಾರ ವಿತರಣೆ ಮಾಡಲಾಯಿತು.




28) 16–12–2022 ರಂದು 12 ಜನರ ತಂಡ District Conference 'ಕನಸು' ಭಾಗವಹಿಸಲು ಚಿಕ್ಕಮಗಳೂರಿಗೆ ಪ್ರಯಾಣ ಬೆಳೆಸಿತು. ಸುಂದರ ಕಾಫಿ ನಾಡಿನಲ್ಲಿ ಮೋಹಕ conference ಮುಗಿಸಿ 17–12–2022 ರಂದು ಹಿಂದಿರುಗಿದೆವು.




29) 31–12–2022 ರಂದು 'ತುಂತುರು' ರೆಸಾರ್ಟ್‌ನಲ್ಲಿ ನೂತನ ವರ್ಷದ ಸಂಭ್ರಮಾಚರಣೆ ನಡೆಯಿತು.



30) 04–12–2022 ರಂದು ಶಿವಮೊಗ್ಗ ತಾಲ್ಲೂಕಿನ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಆರೋಗ್ಯ ತಪಾಸಣ ಕಾರ್ಯಕ್ರಮವನ್ನು ರೋಟರಿ ಸಹಯೋಗದೊಂದಿಗೆ ಹಮಿಕೂಳ್ಳಲಾಯಿತು. ಮತ್ತು ಮಕ್ಕಳಿಗೆ ಸಿಹಿ ಹಂಚಲಾಯಿತು.



31) 18–12–2022 ರಂದು I.W Day ಆಚರಣೆ. ಪ್ರತಿ ವರ್ಷದಂತೆ ಈ ಬಾರಿಯೂ ಕೂಡ I.W Day ವಿಶಿಷ್ಠವಾದ ರೀತಿಯಲ್ಲಿ ಆಚರಿಸಲಾಯಿತು. 'ಶ್ರೀ ಕೃಷ್ಣ ಸಂಧಾನ' ಎಂಬ ಹಾಸ್ಯ ನಾಟಕವನ್ನು ನಮ್ಮ ಸದಸ್ಯರು ಪ್ರಸ್ತುತ ಪಡಿಸಿ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿದರು.



32) ನಮ್ಮ ಕ್ಲಬ್‌ನ ಸದಸ್ಯಯಾದ ಶ್ರೀಮತಿ ಲಕ್ಮೀ ರುದ್ರೇಶ್ ಅವರು ಒಂದು ವರ್ಷದಲ್ಲಿ ಮೂರು ಬಾರಿ ರಕ್ತದಾನ ಮಾಡಿ ತಮ್ಮ ಸೇವಾ ಮನೋಭಾವದಿಂದ ನಮಗೆಲ್ಲ ಪ್ರೇರಣೆಯಾಗಿದ್ದಾರೆ. ಅವರಿಗೆ ನಮ್ಮಲ್ಲರ ಪರವಾಗಿ ಹಾರ್ದಿಕ ಅಭಿನಂದನೆಗಳು.




33) ನಮ್ಮ ಕ್ಲಬ್‌ನ ಪಾಸ್ಟ್ ಪ್ರೆಸಿಡೆಂಟ್ ಶ್ರೀಮತಿ ವೀಣಾ ಹರ್ಷ ಅವರು ಶಿವಮೊಗ್ಗ zoneನ C.G.R (Chairman's Group Representative) ಆಗಿ ಆಯ್ಕೆಗೊಂಡಿದ್ದಾರೆ.



WORK WONDERS
Inner Wheel 2022-23

# ಇನ್ನರ್ ವೀಲ್ ಶಿವಮೊಗ್ಗ ಪೂರ್ವ

Charter No. 5226 Dist. 318

STRONG WOMEN STRONGER WORLD
2021-2024

**I.I.W. President**
Mrs. Zenaida Farcon

**I.W. President**
Mrs. Madhura Mahesh

**Association President**
Dr. Surjit Kaur

**I.W. Secretary**
Mrs. Uma Venkatesh

**District Chairman**
Mrs. Kavitha Niyath

**Editor**
Mrs. Veena Harsha

# ಉಷೆ

2022-23 ಸಂಪುಟ: 20 ಸಂಚಿಕೆ: 01 For Private Circulation only ಜುಲೈ– ಫೆಬ್ರವರಿ 2023

## Chairman's Message:



**Dear friend,**

I feel greatly honoured and privileged to have been entrusted with the responsibility of the highest post of the district as the District Chairman. I extend my wishes and gratitude to one and all.

Friends, lets welcome the new Inner Wheel year with the new visions, new ideas, renewed vigour and unbound enthusiasm. I would like to congratulate the President, Executive committee and members for striving to take their respective clubs to new heights.

"LEADERS BECOME GREAT, NOT BECAUSE OF THEIR POWER, BUT BECAUSE OF THEIR ABILITY TO EMPOWER OTHERS"

You all are my champions who get out and try their best to work wonders. Let us celebrate life, dare to fly with the commitment, confidence and believe to make the community have better tomorrows by sending help in all the fields and bringing the best out of them.

I am sure this Inner Wheel year will be a raging success as you a to drive your wonderful clubs to greater achievements. Anticipating your co operation and support throughout the yea "EVER YOURS IN INNER WHEEL!!!"

Kavitha
District Chairman

## ಕಾರ್ಯದರ್ಶಿಯವರ ನುಡಿ:



ಈ ವರ್ಷದ ಕಾರ್ಯದರ್ಶಿ ಸ್ಥಾನಕ್ಕೆ ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ಧನ್ಯವಾದಗಳು. ಮತ್ತಷ್ಟು ಸೇವಾ ಕಾರ್ಯಗಳನ್ನು ಮಾಡಲು ನಿಮ್ಮೆಲ್ಲರ ಸಹಕಾರ ಹೀಗೆಯೆ ಇರಲಿ. STRONG WOMEN, STRONGER WORLD ಎಂಬ ಮಾತನ್ನು ನಿಜಗೊಳಿಸೋಣ

ಉಮಾ ವೆಂಕಟೇಶ್

## ಅಧ್ಯಕ್ಷರ ನುಡಿ:



**ಆತ್ಮೀಯ ಗೆಳತಿಯರೇ**

ಈ ಬಾರಿ ನನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿ ನನಗೆ ಸೇವೆ ಮಾಡುವ ಅವಕಾಶ ಮಾಡಿಕೊಟ್ಟಿರುವ ನಿಮಗೆಲ್ಲರಿಗೂ ಧನ್ಯವಾದಗಳು. ಅಂತರಾಷ್ಟ್ರೀಯ ಸೇವಾ ಸಂಸ್ಥೆಯಾದ ಇನ್ನರ್ವೀಲ್ ದ್ಯೇಯ ವಾಕ್ಯ ವರ್ಕ್ ವಂಡರ್ಸ್ ಇದಕ್ಕೆ ಸಾಕ್ಷಿ ಪೂರಕ ವಾಗಿ ನಾವು ಸೇವೆ ಮಾಡಲು ಸಹಕಾರ ನೀಡಿದ ಗೆಳತಿ ಯರೆಲ್ಲರಿಗೂ ಹಾಗೂ ರೋಟರಿ ಸಹೋದರ ಸಹೋದರಿಯರಿಗೂ ನಿಮ್ಮ ಸಹಕಾರ ಸದಾ ಹೀಗೆ ಇರಲಿ ಎಂದು ಆಶಿಸುತ್ತೇನೆ ಈ ನಮ್ಮ ಉಷೆ ಯು ಸ್ನೇಹ ,ಸೇವೆಯ ಕೊಂಡಿಯಾಗಿರಲಿ ಮುಂದಿನ ಕಾರ್ಯಕ್ರಮಗಳಿಗೆ ಸ್ಪೂರ್ತಿಯಾಗಲಿ ಈ ವರ್ಷ ದ ನಾಯಕಿ ಕೋಗಿಲೆ ಕಂಠದ ಗಾಯಕಿ ಕವಿತಾ ರವರಿಗೆ ವಂದನೆ ಅಭಿನಂದನೆಗಳು

ಮಧುರ ಮಹೇಶ್

## ಸಂಪಾದಕರ ನುಡಿ:



**ಆತ್ಮೀಯ ಗೆಳತಿಯರೇ**

ಒಳ್ಳೆಯ ಸಂಪಾದಕರಾಗಲು ಮೊದಲು ಒಳ್ಳೆಯ ಓದುಗರಾಗಬೇಕು ಎಂಬ ಹೇಳಿಕೆಯಂತ ನಾವು ಸರಿಯಾದ ರೀತಿಯಲ್ಲಿ ವರದಿಯನ್ನು ಒಪ್ಪಿಸಬೇಕು. ಈ ಸಾಲಿನ ಧ್ಯೇಯ ವಾಕ್ಯ 'ವರ್ಕ್ ವಂಡರ್ಸ್" ಎಂಬಂತೆ ನಮ್ಮ ಸಂಸ್ಥೆ ನಿಷ್ಟೆಯಿಂದ ಮಾಡಿದ ಕಾರ್ಯಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ಸದಾ ಇದೇ ರೀತಿ ಸ್ನೇಹ ಹಾಗೂ ಸೇವೆಯಲ್ಲಿ ಮುಂದುವರೆಯೋಣ.

ವೀಣಾ ಹರ್ಷ

**ಇವರು ಯಾರು ಬಲ್ಲಿರೇನು, ಇವರ ಹೆಸರು ಹೇಳಲೇನು**
**ಇವರು ನಮ್ಮ ನಾಯಕಿ, ಕೋಗಿಲೆ ಕಂಠದ ಗಾಯಕಿ**
**ಮಧುರ ಮಾತಿನ ಮೋಡಿ, ಪಸರಿಸುವುದು ಹಾಡಿ**
**ಚಿಕ್ಕ ಮಂಗಳೂರಿನ ಬೆಡಗಿ, ಇನ್ನರ್ ವೀಲ್‌ನಲ್ಲಿ ತೊಡಗಿ**
**ಹೆಸರಿಗೆ ತಕ್ಕಂತೆ, ಕವಿತಾ ನಿಯತೆ**

## –: ಕಾರ್ಯಕ್ರಮಗಳ ವಿವರ:–

1) 08–07–2022 ರಂದು ಸಂಜೆ 5.30 ಕ್ಕೆ 'ಸರ್ಕಾರಿ ನೌಕರರ ಭವನ' ದಲ್ಲಿ ಪದಗ್ರಹಣ ಸಮಾರಂಭ ನೆರವೇರಿತು. ಅಧ್ಯಕ್ಷರಾಗಿ ಮಧುರಾ ಮಹೇಶ್ ಹಾಗೂ ಕಾರ್ಯದರ್ಶಿಯಾಗಿ ಉಮಾ ವೆಂಕಟೇಶ್ ಪದವಿ ಸ್ವೀಕಾರ ಮಾಡಿದರು. ಪ್ರತಿಷ್ಠಾಪನಾ ಅಧಿಕಾರಿಯಾಗಿ P.D.C. ಸುಧಾ ಪ್ರಸಾದ್ ಆಗಮಿಸಿದ್ದರು. ನಮ್ಮ ಕ್ಲಬ್‌ನ ಸದಸ್ಯರಾದ ಜಿಲ್ಲಾ ಖಜಾಂಜಿ ಶಬರಿ ಕಡಿದಾಳ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ 4 ನೂತನ ಸದಸ್ಯರ ಸೇರ್ಪಡೆಯಾಯಿತು ಮತ್ತು ನಮ್ಮ ಐದು ಜನ I.W. ಸದಸ್ಯರು ಆರ್ಥಿಕವಾಗಿ ಹಿಂದುಳಿದ ರೋಟರಿ ಶಾಲೆಯ ಐದು ಮಕ್ಕಳ ವಾರ್ಷಿಕ ಶುಲ್ಕ ರೂ. 75,000/– ಗಳನ್ನು ನೀಡಿದರು.






2) 10–07–2022 ರಂದು ನಡೆದ ಡಿಸ್ಟ್ರಿಕ್ಟ್ ಅಸೆಂಬ್ಲಿ 'ನಿಯತಿ' ಗೆ ಏಳು ಜನರ ತಂಡ ಮೂಡಬಿದ್ರಿಗೆ ಪ್ರಯಾಣ ಬೆಳೆಸಿತು. ಅತ್ಯಂತ ಸುಂದರವಾದ ಕಾರ್ಯಕ್ರಮದಲ್ಲಿ ಜಿಲ್ಲಾ ಛೇರ್‌ಮನ್ ಆಗಿ ಶ್ರೀಮತಿ ಕವಿತಾ ನಿಯತ್ ಪದವಿ ಸ್ವೀಕಾರ ಮಾಡಿದರು.




3) 18–07–2022 ರಂದು ತುಮಕೂರು ಕ್ಲಬ್‌ನ ಅಧ್ಯಕ್ಷರು ನಮ್ಮ ಕ್ಲಬ್ ಗೆ ಗಿಡಗಳನ್ನು ಕೂಡುಗೆಯಾಗಿ ನೀಡಿದರು. ನಮ್ಮ ಸದಸ್ಯರು ಅದನ್ನು ಖರೀದಿಸಿ ಕ್ಲಬ್‌ಗೆ ಚಾರಿಟಿಯಾಗಿ ನೀಡಿದರು. ಇದೇ ಸಂದರ್ಭದಲ್ಲಿ ನಮ್ಮ I.S.O. ಶಿಲ್ಪಾರವರು ಅವರೊಂದಿಗೆ Flag Exchange ಮಾಡಿಕೊಂಡರು.

4) 25–07–2022 ರಂದು CPR WEEK ಅಂಗವಾಗಿ ನಮ್ಮ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ CPR ಮಾಡುವ ವಿಧಾನ ಹಾಗೂ ಅದರ ಮಹತ್ವವನ್ನು Dr. ಶ್ರೀನಿವಾಸ್ ಹಾಗೂ Dr. ಮಂಜುನಾಥ್ ರವರು ತಿಳಿಸಿಕೊಟ್ಟರು. ಹಾಗೂ ಸದಸ್ಯರ ಕೈಯಲ್ಲಿ ಗೊಂಬೆಯ ಮೇಲೆ ಪ್ರಯೋಗ ಮಾಡಿಸಿದರು.




5) 01–07–2022 ರಂದು ಮಹಿಳಾ ಪಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ 'ಕೌಶಲ್ಯ ತರಬೇತಿ ಶಿಬಿರ' ವನ್ನು ಏರ್ಪಡಿಸಿದ್ದೆವು. ಸುಮಾರು 200 ವಿದ್ಯಾರ್ಥಿನಿಯರು ಇದರ ಉಪಯೋಗ ಪಡೆದುಕೊಂಡರು. ಸಂಪನ್ಮೂಲ ವ್ಯಕ್ತಿಯಾಗಿ Rtn. ಸುರೇಶ್ ದುರ್ಗಪ್ಪನವರು ಆಗಮಿಸಿದ್ದರು.




6) 26–07–2022 ರಂದು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 'ವನಮಹೋತ್ಸವ' ಕಾರ್ಯಕ್ರಮವನ್ನು ಆಚರಿಸಲಾಯಿತು. ಮಕ್ಕಳಿಗೆ ಗಿಡಗಳನ್ನು ಬೆಳೆಸುವ ಮಹತ್ವದ ಬಗ್ಗೆ ತಿಳಿಸಲಾಯಿತು. ಸುಮಾರು 150 ಹಣ್ಣಿನ ಗಿಡಗಳನ್ನು ವಿತರಿಸಲಾಯಿತು.




7) 26–07–2022 ಅದೇ ಶಾಲಿಯ ಮಕ್ಕಳಿಗೆ ಪೆನ್ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು.

8) 28–07–2022 ರಂದು ಸಹ್ಯಾದ್ರಿ ಶಾಲೆಯಲ್ಲಿ ರೋಟರಿ ಸಹಯೋಗದಲ್ಲಿ ಇಂಟರ್‍ಯಾಕ್ಟ್ ಕ್ಲಬ್‌ನ್ನು ಉದ್ಘಟಿಸಲಾಯಿತು. ಮತ್ತು ಮಕ್ಕಳಿಗೆ ಡಿಕ್ಷನರಿ ಹಾಗೂ ಪೆನ್‌ಗಳನ್ನು ವಿತರಿಸಲಾಯಿತು.

9) 03–08–2022 ರಂದು 'ಸ್ತನಪಾನ ಸಪ್ತಾಹ'ದ ಅಂಗವಾಗಿ ಗುರುಪುರದಲ್ಲಿ ಬಸುರಿ ಹೆಂಗಸರಿಗೆ ಎದೆಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ FPAನ ಮಾಜಿ ಅಧ್ಯಕ್ಷರಾಗಿದ್ದ ಪುಷ್ಪ ಶೆಟ್ಟಿಯವರು ಆಗಮಿಸಿದ್ದರು. ಮಹಿಳೆಯರಿಗೆ ಸ್ತನಪಾನಕ್ಕೆ ಸಂಬಂಧಿಸಿದ ರಸಪ್ರಶ್ನೆಗಳನ್ನು ಕೇಳಿ ಬಹುಮಾನ ನೀಡಲಾಯಿತು.



10) 15–08–2022 ರಂದು ರೋಟರಿ ಶಾಲೆಯಲ್ಲಿ 'ಸ್ವಾತಂತ್ರ್ಯ ದಿನಾಚರಣೆ' ಯನ್ನು ಆಚರಿಸಲಾಯಿತು. ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸ್ಪೀಚ್ ಕಾಂಪಿಟೇಷಿನ್ ಇಟ್ಟು ಬಹುಮಾನ ನೀಡಲಾಯಿತು.





11) 20–08–2022 ರಂದು 'ಕೃಷ್ಣ ಜನ್ಮಾಷ್ಟಮಿ'ಯ ಪ್ರಯುಕ್ತ ಪುಟ್ಟ ಮಕ್ಕಳಿಗೆ ರಾಧೆ–ಕೃಷ್ಣ ವೇಷ ಭೂಷಣ ಸ್ಪರ್ದೆ ಏರ್ಪಡಿಸಿ ಬಹುಮಾನ ನೀಡಲಾಯಿತು.

12) 25–08–2022 ರಂದು ಶಿವಮೊಗ್ಗದ ನಾಲ್ಕು I.W. ಕ್ಲಬ್‌ಗಳು ಒಟ್ಟಾಗಿ 'ಸ್ನೇಹಿತರ ದಿನಾಚರಣೆ' ಯನ್ನು ಆಚರಿಸಿದೆವು. ಎಲ್ಲ ಕ್ಲಬ್‌ನ I.S.O. ಗಳು ಸೇರಿ ಅನೇಕ ಆಟೋಟ ಸ್ಪರ್ಧೆಗಳನ್ನು ನಡೆಸಿಕೊಟ್ಟರು. ಕೇಕ್ ಕಟ್ ಮಾಡಿ ಎಲ್ಲರೂ ಸಂಭ್ರಮಿಸಿದರು. ಎಲ್ಲ ಕ್ಲಬ್‌ನ ಸದಸ್ಯರಲ್ಲಿ ಸ್ನೇಹ ಹಾಗೂ ಬಾಂಧವ್ಯವನ್ನು ಬೆಳಿಸುವಲ್ಲಿ ಇಂತಹ ಕಾರ್ಯಕ್ರಮಗಳು ಅವಶ್ಯಕ.




13) 26–08–2022 ರಂದು 'ಋತುಚಕ್ರದ ಬಗ್ಗೆ ಅರಿವು' ಕಾರ್ಯಕ್ರಮವನ್ನು ರೋಟರಿ ಶಾಲೆಯ ಹೆಣ್ಣುಮಕ್ಕಳಿಗೆ ಹಾಗೂ ಮಹಿಳಾ ಶಿಕ್ಷಕಿಯರಿಗೆ ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ನಮ್ಮ ಕ್ಲಬ್‌ನ ಸದಸ್ಯೆ ವೀಣಾ ಸುರೇಶ್ ಮಾತನಾಡಿ, 'Menstrual Cups' ಬಳಸುವ ಬಗ್ಗೆ ಮಾಹತಿ ನೀಡಿದರು. ಹಾಗೂ ಅಧ್ಯಕ್ಷೆ ಮಧುರಾ ಮಹೇಶ್ ಮಕ್ಕಳಿಗೆ ಉಚಿತವಾಗಿ 'cups' ವಿತರಿಸಿದರು.

14) 05–08–2022 ರಂದು ವರಮಹಾಲಕ್ಷ್ಮಿ ಪೂಜೆಯನ್ನು ನಮ್ಮ ಕ್ಲಬ್‌ನ ಸದಸ್ಯರಾದ ಉಮಾ ವೆಂಕಟೇಶ್, ರಾಜೇಶ್ವರಿ ಪ್ರತಾಪ್ ಹಾಗೂ ಸಂಗೀತಾ ಶರತ್ ರವರ್ ಮನೆಗಳಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.




15) 01–09–2022 ರಂದು past president Sunanda Jagadish ಅವರ ಮನೆಯಲ್ಲಿ ಗೌರಿ ಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಲಾಯಿತು.ನಾಲ್ಕು ಶತಮಾನಗಳಷ್ಟು ಹಿಂದಿನ ಗಜ ಗೌರಿ ಮೂರ್ತಿಯನ್ನು ಆಲಂಕರಿಸಿ ಶ್ರದ್ಧೆ ಭಕ್ತಿಯಿಂದ ಪೂಜಿಸಲಾಗುತ್ತದೆ.

16) 08–09–2022 ರಂದು ನಮ್ಮ ಕ್ಲಬ್‌ನ ಯಶಸ್ವಿ ಮಹಿಳಾ ಉದ್ಯಮಿಗಳಾದ ನಮಿತಾ ಸೂರ್ಯನಾರಾಯಣ ಹಾಗೂ ಉಮಾ ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. J.C. Sahyadri ರವರ ಸಹಯೋಗದೊಂದಿಗೆ ನಡೆದ ಕರ್ಯಕ್ರಮ.





17) 09–09–2022 ರಂದು 'ಗುಡ್ ಲಕ್ ಆರೈಕೆ ಕೇಂದ್ರ' ಕ್ಕೆ ಭೇಟಿ ನೀಡಿ, ಅಗತ್ಯ ವಸ್ತುಗಳಾದ ಅಕ್ಕಿ, ಬೇಳೆಗಳನ್ನು ವಿತರಿಸಲಾಯಿತು.

18) 03–09–2022 ರಂದು ನೂತನ ಸದಸ್ಯೆ ಲಾವನ್ಯ ಅವರ ಸೇರ್ಪಡೆಯಾಯಿತು. ಜಿಲ್ಲಾ ಖಜಾಂಜಿ ಶಬರಿ ಕಡಿದಾಳ್ ಅವರು ಪಿನ್ ತೊಡಿಸಿ ಅವರನ್ನು ಸ್ವಾಗತಿಸಿದರು.

19) 11–09–2022 ರಂದು ನಡೆದ District Rally 'Khushi' ಗೆ ಹನ್ನೊಂದು ಜನರ ತಂಡ ಕುಶಾಲನಗರಕ್ಕೆ ಪ್ರಯಾಣ ಬೆಳೆಸಿತು. ಮತ್ತು ಮಧುರಾ ಮಹೇಶ್ ಅವರ ಅಕ್ಕನ ಮನೆಯಲ್ಲಿ ಉಳಿದ ನೆನಪು ಹಾಗೂ ಸುಂದರ ಅನುಭವ ಎಂದಿಗೂ ಮರೆಯಲಾರದ್ದು.




20) 15–09–2022 ರಂದು ರೋಟರಿ ಶಾಲೆಯ ಮಕ್ಕಳಿಗೆ ನಡೆದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಶಾಲೆಗೆ First Aid Kit ನೀಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ Rtn. ಡಾ॥ ಹರ್ಷ ತಪಾಸಣೆ ನಡೆಸಿದರು.





21) 02–10–2022 ರಂದು ರೋಟರಿ ಶಾಲೆಯಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಅಚರಿಸಲಾಯಿತು.

22) 01–11–2022 ರಂದು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ಹಾಗೂ ನಾಡಗೀತೆಗಳನ್ನು ಹಾಡಿದೆವು. ಇದೇ ಸಂದರ್ಭದಲ್ಲಿ ಬಡ ಕಾರ್ಮಿಕರೊಬ್ಬನಿಗೆ ರೋಟರಿ ಸಹಯೋಗದೊಂದಿಗೆ ವೀಲ್‌ಛೇರ್ ಕೊಡುಗೆ ನೀಡಲಾಯಿತು.




23) 07–10–2022 ರಂದು ಮೈಸೂರಿನಲ್ಲಿ ನಡೆದ District ISO Meet ನಲ್ಲಿ ನಮ್ಮ ಕ್ಲಬ್‌ನ ISO ಶಿಲ್ಪಾ ಗೋಪಿನಾಥ್ ಪ್ರಥಮ ಸ್ಥಾನ ಪಡೆದು 'ಮಿಸ್ ಮನೋಹರಿ' ಯಾಗಿದ್ದು ನಮಗೆಲ್ಲ ಹೆಮ್ಮೆಯ ವಿಷಯ.



24) 14–11–2022 ರಂದು ರೋಟರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಆಚರಿಸಿ ಮಕ್ಕಳಿಗೆ ಸಿಹಿ ಹಂಚಲಾಯಿತು.

25) 17–11–2022 ರಂದು ಮೊದಲ ಬಾರಿಗೆ 'Charter Day' ಆಚರಿಸಲಾಯಿತು. ನಮ್ಮ ಕ್ಲಬ್‌ನ ಸಂಸ್ಥಾಪಕ ಅಧ್ಯಕ್ಷ ದಿ॥ ಶೋಭಾ ಕಡಿದಾಳ್ ಅವರನ್ನು ಸ್ಮರಿಸಿ, ಎಲ್ಲ Charter Membersಗಳನ್ನು ಸನ್ಮಾನಿಸಲಾಯಿತು. ಹಾಗೂ ಅವರಿಗೆ ಅನೇಕ ಆಟೋಟಗಳನ್ನು ಆಡಿಸಿ ಬಹುಮಾನ ನೀಡಲಾಯಿತು.

